ಆ) ಪಶು ಚಿಕಿತಾಲಯಕೆ ಬೇಕಾಗುವ ಸಿಬ್ಬಂದಿಗಳ ವಿವರ ಈ ಕೆಳಗಿನಂತಿದೆ.

| | | |
|---|---|---|
| 1 | – | ಪಶುವೈದ್ಯಾಧಿಕಾರಿ |
| 1 | – | ಪಶುವೈದ್ಯಕೀಯ ಪರೀಕ್ಷಕರು |
| 1 | – | ಪಶುವೈದ್ಯಕೀಯ ಸಹಾಯಕರು |
| 2 | – | ಡಿ ದರ್ಜೆ ನೌಕರರು |

ಇ) ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಹತ್ತು ಪಶುವೈದ್ಯಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ. ಅವರಲ್ಲಿ ಮೂರು ಜನ ಔರಾದ್ ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ. ರಾಜ್ಯಾದ್ಯಂತ 250 ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದೆ.

**ಬೀದರ್ ಜಿಲ್ಲೆಯ ವಸತಿ ನಿಲಯಗಳ ಕಟ್ಟಡಗಳು**

4165 (4908) : ಶ್ರೀ ಗುಂಡಪ್ಪವಕೀಲ್ (ಔರಾದ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ 1. ಮುಧೋಳ (ಬಿ) 2. ಡಾಬಕಾ ಗ್ರಾಮಗಳಲ್ಲಿ ಸರ್ಕಾರಿ ವಸತಿ ನಿಲಯಗಳಿದ್ದು ಕಟ್ಟಡವಿಲ್ಲದೇ ಖಾಸಗಿ ಮನೆಗಳಲ್ಲಿ ನಿಲಯಗಳು ನಡೆಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ವಸತಿ ನಿಲಯಗಳ ನಿರ್ಮಾಣ ಕಾರ್ಯ ಕೈಗೊಳ್ಳಲು ಸರ್ಕಾರದ ಉದ್ದೇಶವಿದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆ – ಹೌದು

ಡಾಬಕಾದ ವಿದ್ಯಾರ್ಥಿನಿಲಯ ಖಾಸಗಿ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಮುಧೋಳ (ಬಿ) ವಿದ್ಯಾರ್ಥಿನಿಲಯವು ವಿದ್ಯಾರ್ಥಿನಿಯರು ದೊರೆಯದ ಕಾರಣ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿರುವುದಿಲ್ಲ. ಮುಧೋಳದಲ್ಲಿರುವ ವಿದ್ಯಾರ್ಥಿನಿಲಯವನ್ನು ಔರಾದ್‌ಗೆ ವರ್ಗಾಯಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

| | | |
|---|---|---|
| ಪರಿಶಿಷ್ಟ ವರ್ಗಗಳ ಇಲಾಖೆ | – | ಇಲ್ಲ |
| ಹಿಂದುಳಿದ ವರ್ಗಗಳ ಇಲಾಖೆ | – | ಇಲ್ಲ |
| ಆ) ಸಮಾಜ ಕಲ್ಯಾಣ ಇಲಾಖೆ | – | ಸರ್ಕಾರದ ಪರಿಶೀಲನೆಯಲ್ಲಿದೆ |
| ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | – | ಉದ್ಭವಿಸುವುದಿಲ್ಲ |
| ಹಿಂದುಳಿದ ವರ್ಗಗಳ ಇಲಾಖೆ | – | ಉದ್ಭವಿಸುವುದಿಲ್ಲ |

**ಯಳಂದೂರು ತಾಲ್ಲೂಕಿನಲ್ಲಿ ಗಣಿಗಾರಿಕೆ ನಡೆಸುತ್ತಿರುವುದರಿಂದ ಆಗುತ್ತಿರುವ ತೊಂದರೆಗಳ ಬಗ್ಗೆ**

4167 (4793) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮತ್ತು ಶ್ರೀ ಜಿ. ನಂಜುಂಡಸ್ವಾಮಿ (ಕೊಳ್ಳೇಗಾಲ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?